ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 5, November-December 2022, Pp. 166- 172
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಆಧುನಿಕ ಸಾಹಿತ್ಯದ ಕಾಲಘಟ್ಟಗಳು: ಒಂದು ಅವಲೋಕನ

**ಡಾ. ಚಾಂದಸಾಬ ಮುಜಾವರ**[*]

[*]ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

***Abstract:***

*ಆಧುನಿಕ ಕನ್ನಡ ಸಾಹಿತ್ಯವು ಇಪ್ಪತ್ತನೇ ಶತಮಾನದಲ್ಲಿ ಬೆಳೆದ ಸಾಹಿತ್ಯ ಪ್ರಕಾರವಾಗಿದೆ. ಕ್ರೈಸ್ತ ಮಿಷನರಿಗಳು ಮಾಡಿದ ಕಾರ್ಯದ ಫಲವಾಗಿ ಸಾಹಿತ್ಯ ಚಳುವಳಿಯಲ್ಲಿ ಅನೇಕ ಬದಲಾವಣೆಯಾಗಿ ಹೊಸದೊಂದು ಗಾಳಿ ಬೀಸತೊಡಗಿತು. ಆಧುನಿಕತೆ ಎನ್ನುವುದು ಮಾನವ ಜೀವನದಲ್ಲಿ ಹೊಸಮೌಲ್ಯವಾಗಿ ಪರಿಣಮಿಸಿತು. ನವೋದಯ ಕಾಲಘಟ್ಟವು ಹೊಸ ಆಲೋಚನಾ ಕ್ರಾಂತಿಗೆ ನಾಂದಿಯಾಯಿತು. 'ನವೋದಯ ಸಾಹಿತ್ಯವನ್ನು ಹೊಸಗನ್ನಡ ಸಾಹಿತ್ಯವೆಂದು ಕುವೆಂಪುರವರು ಕರೆಯುತ್ತಾರೆ' ಚಳುವಳಿಯ ಸಂದರ್ಭದಲ್ಲಿ ಸಾಹಿತ್ಯಿಕವಾಗಿ ಅನೇಕ ಬದಲಾವಣೆಗಳಾದಂತೆ ಪಾಶ್ಚಾತ್ಯ ವಿದ್ವಾಂಸರ ಹಾಗೂ ಸಾಹಿತ್ಯದ ಪರಿಚಯವೂ ಆಯಿತು. ಸಾಹಿತ್ಯ ನಿಂತ ನೀರಾಗದೇ ಹರಿಯುವ ಝರಿಯಾಯಿತು. ಬಿಎಂಶ್ರೀಯವರು ಇಂಗ್ಲಿಷ್ ಗೀತೆಗಳ ಮುಖಾಂತರ ಹೊಸಗನ್ನಡ ಸಾಹಿತ್ಯಕ್ಕೆ ನಾಂದಿಹಾಕಿದರು. ಗೋವಿಂದ ಪೈರವರು ಸುನೀತಗಳನ್ನು ಮೊದಲು ಪ್ರಯೋಗಿಸಿದರು. ಒಂದು ರೀತಿಯಲ್ಲಿ ಪ್ರಯೋಗಿಸುವ ಸಲುವಾಗಿಯೇ ಸಾಹಿತ್ಯ ಚಿಂತನೆ ಹೆಚ್ಚು ಹೆಚ್ಚು ಪ್ರಕಾರವಾಗಿ ಬೆಳೆಯಿತು ಎಂದರೆ ತಪ್ಪಾಗಲಾರದು.*

***Keywords:*** *ಆಧುನಿಕ ಸಾಹಿತ್ಯ, ನವೋದಯ ಸಾಹಿತ್ಯ, ಹೊಸಗನ್ನಡ.*

## ಪೀಠಿಕೆ

ನವೋದಯ ಸಾಹಿತ್ಯದ ಲೇಖಕರಾದ ಬಿಎಂಶ್ರೀ, ಡಿ.ವಿ.ಜಿ, ಎಂ.ಗೋವಿಂದ ಪೈ, ಕುವೆಂಪು, ಶಿವರಾಮ ಕಾರಂತ, ಟಿ.ಪಿ.ಕೈಲಾಸಂ, ಶ್ರೀರಂಗ, ಮಿರ್ಜಿ ಅಣ್ಣಾರಾಯ, ಬೇಂದ್ರೆ, ಮುಳಿಯ ತಿಮ್ಮಪ್ಪಯ್ಯ, ದೇವುಡು, ರಾವಬಹದ್ದೂರ, ಕೆ.ವಿ.ಅಯ್ಯರ್, ಜಿ.ಎಸ್.ಶಿವರುದ್ರಪ್ಪ, ಎಸ್.ಜಿ.ನರಸಿಂಹಚಾರ್ಯ, ಪಂಜೇಮಂಗೇಶರಾಯ, ಮಾಸ್ತಿ, ಎಂ.ಎಸ್.ಪುಟ್ಟಣ್ಣ, ಎಂ.ಎಲ್. ಶ್ರೀಕಂಠೇಗೌಡ, ಎಂ.ಎಂ.ಕಲಬುರ್ಗಿ, ಎಂ.ಚಿದಾನಂದ ಮೂರ್ತಿ, ವಿ ಸೀತಾರಾಮ, ರಾಜರತ್ನಂ, ಪು.ತಿ.ನ, ಕೆ.ಎಸ್.ನರಸಿಂಹಸ್ವಾಮಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮುಂತಾದ ಲೇಖಕರು ಸೃಜನಶೀಲ ಸಾಹಿತ್ಯದಲ್ಲಿ ತಮ್ಮನ್ನು ದುಡಿಸಿಕೊಂಡಿದ್ದಾರೆ. ನವೋದಯ ಸಾಹಿತ್ಯದಲ್ಲಿ ಪ್ರೇಮ, ಏಕಾಂತತೆ, ನಿಸರ್ಗಪ್ರಿಯತೆ, ಅನುಭಾವಿಕತೆ, ಆದರ್ಶಪರತೆ ಹೀಗೆ ಹಲವು ಬಗೆಯ ಅರ್ಥಗಳನ್ನು ಒಳಗೊಂಡ ಸಾಹಿತ್ಯ ಪಂಥವಾಯಿತು. ನಮ್ಮ ನವೋದಯ ಕವಿಗಳ ಮನೋಧರ್ಮದಲ್ಲಿ ಈ

***Please cite this article as***: ಚಾಂದಸಾಬ ಮುಜಾವರ. (2022). ಆಧುನಿಕ ಸಾಹಿತ್ಯದ ಕಾಲಘಟ್ಟಗಳು: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(5), 166–172.

ಆಲೋಚನೆಗಳಿರಲಿಲ್ಲವೇ? ಅದನ್ನು ಪಾಶ್ಚಾತ್ಯರಿಂದಲೇ ಕಲಿಯಬೇಕಾಯಿತೇ? ಕುವೆಂಪುರವರ ಕೃತಿಗಳಲ್ಲಿ ನಾವು ಪ್ರಕೃತಿ ಆರಾಧನೆಯನ್ನು ಸಾಕಷ್ಟು ಕಾಣುತ್ತೇವೆ. ಅವರ ಸಾಹಿತ್ಯದ ರಚನೆಯಲ್ಲಿಯೂ ಆದರ್ಶವಿರುವುದನ್ನು ಗುರುತಿಸಬಹುದು, ಆದರೆ ಅವುಗಳ ಬಗ್ಗೆ ನಾವು ಹೆಚ್ಚು ಗಮನ ಕೊಟ್ಟಿಲ್ಲ ಅಷ್ಟೇ.

ಸಣ್ಣಕಥೆ ಸಾಹಿತ್ಯ ಪ್ರಕಾರ ನಮ್ಮಲ್ಲಿರಲಿಲ್ಲವೇ? ವಡ್ಡಾರಾಧನೆಯ ಕಥೆಗಳಲ್ಲಿ ಆದರ್ಶವಿಲ್ಲವೇ? ಇದೆ ಆದರೆ ಅದನ್ನು ಗ್ರಹಿಸುವಲ್ಲಿ ವಿಫಲವಾಗಿದ್ದೇವೆ. ಅದನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳಲು ಹತ್ತೊಂಬತ್ತನೇ ಶತಮಾನದವರೆಗೆ ಕಾಯಬೇಕಾಯಿತು. ಸಾಹಿತ್ಯದಲ್ಲಿ ಕಥೆ, ಕಾದಂಬರಿ, ನಾಟಕ, ಕಾವ್ಯ, ಭಾವಗೀತೆ ಇತ್ಯಾದಿ ಪ್ರಕಾರಗಳು ಆಕರ್ಷಿಸಿದ್ದು ಇಂಗ್ಲಿಷ್ ಸಾಹಿತ್ಯದ ಪರಿಚಯದಿಂದಲೇ ಎನ್ನಬಹುದು. ಇಂಗ್ಲಿಷ್ ಭಾಷೆಯ ವಿವಿಧ ಪ್ರಯೋಗಗಳು, ಹೊಸ ಹೊಸ ಬಗೆಯ ಛಂದೋರೂಪಗಳು ಕನ್ನಡ ಕವಿಗಳ ಕುತೂಹಲ ಕೆರಳಿಸಿದವು. ಕನ್ನಡದ ಹಲವಾರು ಲೇಖಕರು ಇಂಗ್ಲೀಷಿನ ನಾಟಕಗಳ ಭಾಷಾಂತರ, ರೂಪಾಂತರಗಳಲ್ಲೂ ತೊಡಗಿದ್ದರು. ಷೇಕ್ಸ್‌ಪಿಯರನ ಅನೇಕ ನಾಟಕಗಳು ಕನ್ನಡಕ್ಕೆ ರೂಪಾಂತರಗೊಂಡಿವೆ. 1911ರಲ್ಲಿ ಬಿಎಂಶ್ರೀಯವರು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ 'ಕನ್ನಡ ಮಾತು ತಲೆ ಎತ್ತುವ ಬಗೆ' ಎಂಬ ಉಪನ್ಯಾಸದಲ್ಲಿ ನವೋದಯ ಸಾಹಿತ್ಯದ ಆರಂಭ ಬೆಳವಣಿಗೆ ಕುರಿತು ಮಾತಾನಾಡಿದರು. ಅವರ 'ಇಂಗ್ಲೀಷ ಗೀತಗಳು' ಕನ್ನಡ ಇಂಗ್ಲೀಷ್ ಅನುವಾದಿತ ಕವನಗಳನ್ನೊಳಗೊಂಡಿದೆ. ಪಾಶ್ಯಾತ್ಯ ರೊಮ್ಯಾಂಟಿಕ್ ಕವಿಗಳಾದ ವರ್ಡ್ಸ್‌ವರ್ತ್, ಶೆಲ್ಲಿ, ಬರ್ನ್ಸ್, ಷೇಕ್ಸ್‌ಪಿಯರ ಮುಂತಾದವರ ಕವನಗಳು ಕನ್ನಡದ ಕವಿಗಳಿಗೆ ಪ್ರೇರಣೆಯಾಯಿತು. ಅನುವಾದ ಕವಿತೆಗಳ ಸಂಗ್ರಹವೇ ಆದರೂ ವಸ್ತು, ಭಾಷೆ, ಛಂದಸ್ಸುಗಳಲ್ಲಿ ಇದು ತುಂಬ ನವೀನವಾಗಿದ್ದು ಹೊಸಗನ್ನಡ ಸಾಹಿತ್ಯಕ್ಕೆ ಪೊರಕವಾಯಿತು.

ಶತಮಾನಗಳ ಕಾಲ ಕನ್ನಡ ಕಾವ್ಯ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದ ಒಂದು ನಿಯಮವೆಂದರೆ ಆದಿಪ್ರಾಸದ ಬಳಕೆ. ಕಾವ್ಯಗಳಲ್ಲಿ ಆದಿಪ್ರಾಸವನ್ನು ಬಿಟ್ಟು ಬಿಡುವ ಧೈರ್ಯ ಮಾಡಿದವರು ಗೋವಿಂದ ಪೈಯವರು 'ಇಂದು ಒಬ್ಬನೇ ನಡೆದ ಮೇಕೆದಾರಿಯೇ ಮುಂದೆ ತೆರೆಳುವ ಹೆದ್ದಾರಿ' ಎಂದು ಪ್ರಾಸವನ್ನು ತ್ಯಜಿಸಿದರು. 'ಆದಿಪ್ರಾಸವನ್ನು ಬಿಟ್ಟು ಬರೆಯಬೇಕೆಂದು ನನಗೆ ಪದೇ ಪದೇ ಸ್ಫುರಿಸುತ್ತಿತ್ತು ಆದರೆ ಚೇಳಿನ ಮಂತ್ರ ಬಾರದೆ, ಹಾಲಿನ ಗುದ್ದಿನಲ್ಲಿ ಕೈಹಾಕಲಾರದೆ ಹಾಗೆ ಬರೆಯಲು ಮನಸ್ಸು ಅಳುಕುತ್ತಿತ್ತು'[1] 'ಆಗೋದು ಹೋಗೋದು ದೇವರ ಇಚ್ಛೆ, ಹೂಡದು ಬಿತ್ತೋದು ನನ್ನ ಇಚ್ಛೆ, ಇನ್ನು ಮೀನ ಮೇಷ ನೋಡದೆ ಪ್ರಾಸವನೀಗಲೇ ತೊರೆದು ಬಿಡುವುದೇ ನಿಶ್ಚಯ ಎಂದಾಯಿತು'[2] ನವೋದಯ ಕವಿಗಳ ವಿಚಾರಗಳು, ಚಿಂತನೆಗಳು ಬೇರೆ ಬೇರೆಯಾಗಿದ್ದವೆಂಬುದಕ್ಕೆ ಇದೊಂದು ಉತ್ತಮ ನಿದರ್ಶನವಾಗುತ್ತೆ.

ಬದುಕು ಸ್ವೀಕಾರಾರ್ಹ, ಮೌಲ್ಯಗಳ ಸ್ವೀಕಾರ, ಆಧ್ಯಾತ್ಮಿಕತೆ, ಭಾವತೀರೇಕ, ಕನಸುಗಾರಿಕೆ, ಆದರ್ಶಪ್ರಿಯತೆ, ರಾಷ್ಟ್ರೀಯತೆಯ ಮನೋಭಾವ, ಮಾನವೀಯತವಾದ ಇವು ನವೋದಯ ಸಾಹಿತ್ಯ ಘಟ್ಟದ ಪ್ರಧಾನ ಲಕ್ಷಣಗಳು. ಸತ್ಯ ಸೌಂದರ್ಯ, ಶಿವ, ಪ್ರಕೃತಿ ಪ್ರೇಮ ಇತ್ಯಾದಿ ಅಂಶಗಳನ್ನು ವಸ್ತುವಾಗಿಟ್ಟುಕೊಂಡು ಸಾಹಿತ್ಯ ಸೃಷ್ಟಿಸಿದರು. *ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ* ಎಂಬುದು

---

1 ಲಕ್ಷ್ಮೀನಾರಾಯಣ ಭಟ್ಟ ಎನ್.ಎಸ್. (2019). *ಕನ್ನಡ ಸಾಹಿತ್ಯ ಚರಿತ್ರೆ.* ಪು.ಸಂ. 139

2 ಅದೇ ಪು. ಸಂ. 140

ಕವಿಗಳ ಪರಮ ಕಾವ್ಯೋದ್ದೇಶವಾಗಿತ್ತು. ನವೋದಯ ಸಾಹಿತ್ಯಕ್ಕೆ ಪ್ರೇರಣೆಗಳಿದ್ದಂತೆ ಧೋರಣೆಗಳಿದ್ದವು. ಆಶಾವಾದಿತನ, ಜೀವನೋತ್ಸಾಹ, ನಿಸರ್ಗ ಪ್ರೀತಿ, ಆಧ್ಯಾತ್ಮಿಕತೆ, ಆದರ್ಶವಾದಿ ಮನೋಭಾವ, ಕನಸುಗಾರಿಕೆ ಮುಂತಾದ ವಿಷಯಗಳು ಸಾಹಿತ್ಯ ಇಂದ್ರಿಯಾನುಭವಗಳಿಗೆ ಬೆಲೆ ಕೊಡುತ್ತಲೆ ಅತೀಂದ್ರಿಯಾನುಭವಗಳನ್ನು ನಂಬುತ್ತದೆ. ಬದುಕಿನ ಕಠೋರ ವಾಸ್ತವಗಳಿಗೆ, ಸಮಾಜದಲ್ಲಿ ನಡೆಯುವ ಶೋಷಣೆ ಅನ್ಯಾಯಗಳಿಗೆ ನವೋದಯ ಸಾಹಿತ್ಯ ಕುರುಡಾಯಿತು ಎಂದು ಭಾವಿಸಬೇಕಾಗಿಲ್ಲ ಅಂಥ ವಿಷಯಗಳನ್ನು ಕುರಿತು ಆಕ್ರೋಶ, ಟೀಕೆ, ವಿಡಂಬನೆ, ಪ್ರತಿಭಟನೆ ಇರುವಂಥ ಸಾಹಿತ್ಯವೂ ಸಾಕಷ್ಟು ಪ್ರಮಾಣದಲ್ಲೇ ಸೃಷ್ಟಿಯಾಗಿದೆ.

ಕನ್ನಡ ಸಾಹಿತ್ಯ ಚಳುವಳಿಗೆ ಹೊಸಗನ್ನಡ ಸಾಹಿತ್ಯ ಮೊದಲ ಹಂತದಲ್ಲಿತ್ತು. ಹಲವಾರು ವಿಷಯಗಳಲ್ಲಿ ಪ್ರಯೋಗಗಳ ಅನುಸಾರವಾದ ಸಾಹಿತ್ಯ ಹಾಗೂ ಜಗತ್ತಿನ ಶಿಖರಗಳನ್ನು ತೋರಿಸಿದ ಚೇತನೋತ್ಸಾಹದ ಕಾಲ, ಸಮೃದ್ಧಿ ಬೆಳೆ ಬೆಳೆಯುವ ಕಾಲವಾಗಿ ಈ ಕಾಲಘಟ್ಟದ ಸಾಹಿತ್ಯವೂ ಬೆಳವಣಿಗೆ ಆಯಿತು. ಒಳ್ಳೆಯ ಪರಂಪರೆಯನ್ನು ಸೃಷ್ಟಿ ಮಾಡಿ ಬದುಕಿನ ಹೊಸ ಅನುಭವಗಳಿಗೆ ಪ್ರತಿಕ್ರಿಯೆಯಾಗಿದೆ. ನವೋದಯ ಸಾಹಿತ್ಯದ ಸೃಷ್ಟಿ, ಧೋರಣೆಗಳು ಕನ್ನಡದ ಕೆಲವು ಸಾಹಿತಿಗಳಿಗೆ ದುರ್ಬಲವೆಂದು ಕಾಣಿಸತೊಡಗಿತು ಹಾಗಾಗಿ ಪ್ರಗತಿಶೀಲ ಸಾಹಿತ್ಯದ ಬೆಳವಣಿಗೆ ಇದು ಕಾರಣವಾಯಿತು. ಕಥೆ, ಕಾದಂಬರಿ, ನಾಟಕ, ಅನುವಾದ ಕೃತಿಗಳ ಸೃಷ್ಟಿ ಬಹಳಷ್ಟು ಆಯಿತು. ಪಂಜೇಮಂಗೇಶರಾಯರು, ಮಾಸ್ತಿಯಂತವರು ಪ್ರಮುಖ ಕಥೆಗಾರರಾಗಿ ಬೆಳೆದರು. ಕಾದಂಬರಿ ಸಾಹಿತ್ಯ ಪ್ರಕಾರದಲ್ಲಿ ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿಯಾದ ಇಂದಿರಾಬಾಯಿ, ಇಂದಿರಾ, ವಾಗ್ದೇವಿ, ಶೃಂಗಾರ ಚಾತುರ್ಯೋಲ್ಲಾಸಿನಿ, ದುರ್ಗೇಶ ನಂದಿನಿ, ಕುಮುದಿನಿ, ಕಮಲಕುಮಾರಿ, ಮಾಡಿದ್ದುಣ್ಣೋ ಮಹಾರಾಯ ಇತ್ಯಾದಿ ಕಾದಂಬರಿಗಳು ಸೃಷ್ಟಿಯಾದವು. ಮಾಸ್ತಿಯವರ 'ಗೌಡರ ಮಲ್ಲಿ' ನವೋದಯ ಸಾಹಿತ್ಯದಲ್ಲಿ ರಚಿತವಾದ ಕೃತಿಯಾಗಿದೆ. ಕುವೆಂಪುರವರ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು' ಕಾದಂಬರಿಗಳಲ್ಲಿ ಪ್ರಕೃತಿಯ ಸಹಜ ವರ್ಣನೆಯಿರುವುದನ್ನು ಕಾಣಬಹುದು. ಟಿ.ಪಿ.ಕೈಲಾಸಂರವರ ಟೊಳ್ಳುಗಟ್ಟಿ, ಶ್ರೀರಂಗರ ಹರಿಜನ್ವಾರ, ಪ್ರಪಂಚ ಪಾಣಿಪತ್ತು ಇತ್ಯಾದಿ ನಾಟಕಗಳು ರಚನೆಗೊಂಡಿವೆ. ಶಿವರಾಮ ಕಾರಂತರ ಚೋಮನದುಡಿ, ಸರಸಮ್ಮನ ಸಮಾಧಿ, ಬೆಟ್ಟದ ಜೀವ, ದೇವದೂತರು, ಮೂಕಜ್ಜಿಯ ಕನಸುಗಳು ಮುಂತಾದ ಕಾದಂಬರಿಗಳು ಓದುವ ಸಹೃದಯಿಯು ಮಗ್ನನಾಗಿ ಚಿಂತನೆಯಲ್ಲಿ ತೊಡಗಿಕೊಳ್ಳುವಂತೆ ಪ್ರೇರೇಪಿಸುತ್ತವೆ.

**ಪ್ರಗತಿಶೀಲ ಸಾಹಿತ್ಯ**

ನವೋದಯ ಸಾಹಿತಿಗಳು ಮಧ್ಯಮ ವರ್ಗದವರಿಗೆ ಸುಖದ ಕನಸನ್ನುಣಿಸುವಷ್ಟು ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದಾರೆ. ಅದಕ್ಕೆ ತಕ್ಕ ಹಾಗೆ ಭಾಷೆಯನ್ನು ಮೃದುಗೊಳಿಸಿಬಿಟ್ಟಿದ್ದಾರೆ. ಅಲ್ಲದೆ ಸಮಾಜದಲ್ಲಿ ನಡೆಯುವ ಕಠೋರ ವಾಸ್ತವಗಳನ್ನು ತೆರೆಯುವುದಕ್ಕೂ ಮುಜುಗರ ಅನುಭವಿಸುತ್ತಿದ್ದಾರೆಂಬ ಅಭಿಪ್ರಾಯ ಆ ಸಾಹಿತಿಗಳ ಮನಸ್ಸಿಗೆ ಬಂತು. ಈ ಬಗೆಯ 'ರಾಜಸೇವಾಸ್ತಕರ ರಾಜಸೇವಾ ಪ್ರಸಕ್ತರ, ಜರಿರುಮಾಲಿನವರ ಸಾಹಿತ್ಯ ಸಾಕು'[3] ಎಂಬ ಪ್ರತಿಭಟನೆಯ ಕೂಗು

---

[3] ಶಿವಶರಣಪ್ಪ ಮೋತಕಪಳ್ಳಿ. (2013). *ಕನ್ನಡ ಸಾಹಿತ್ಯ ಸಂಜೀವಿನಿ.* ಪು.ಸಂ. 190

ಆರಂಭವಾಯಿತು. ಅನಕೃರವರ ಬರವಣಿಗೆಯ ಶೈಲಿಯೇ ಪ್ರಗತಿಶೀಲ ಚಳುವಳಿಗೆ ಪ್ರೇರಣೆಯಾಯಿತು. ಹಿಂದಿನ ಸಾಹಿತ್ಯದಂತೆ ಪ್ರಗತಿಶೀಲ ಸಾಹಿತ್ಯವು ಜೀವನ ಪ್ರೀತಿಯನ್ನು ಪ್ರದಿಪಾದಿಸುತ್ತದೆ. ಬಂಡವಾಳಿಶಾಹಿ ವ್ಯವಸ್ಥೆಯನ್ನು ವಿರೋಧಿಸುತ್ತದೆ. ದುರ್ಬಲರ, ಶೋಷಿತರ, ಶ್ರಮಜೀವಿಗಳ ಹಾಗೂ ದಲಿತರ ಸಮಸ್ಯೆಗಳನ್ನು ಚಿತ್ರಿಸಲು ಬಯಸುತ್ತಿದ್ದರು. ಕ್ರಾಂತಿಯಿಂದ ಮಾತ್ರವೇ ಶಾಂತಿ ಸಾಧ್ಯವೆಂಬ ಮನೋಭಾವವಿತ್ತು. ಸಮತಾವಾದವೇ ಸಮಾಜಕ್ಕೆ ಸ್ವೀಕಾರಾರ್ಹ ಚಿಂತನೆಯೆಂದು ಪ್ರತಿಪಾದಿಸುವರು. ವ್ಯಕ್ತಿ ಮತ್ತು ರಾಷ್ಟ್ರದ ಸ್ವಾತಂತ್ರವನ್ನು ಗೌರವಿಸುತ್ತದೆ. ಆ ಸ್ವತಂತ್ರಗಳ ರಕ್ಷಣೆಗಾಗಿಯೇ ಲೇಖನಿಯನ್ನು ಝಳಪಿಸುತ್ತದೆ. ಭಾಷೆಗಿರುವ ಮಡಿ ಮೈಲಿಗೆಗಳ ಭಾವನೆಯನ್ನು ಕಿತ್ತು ಹಾಕಿದರು. ಬಂಡವಾಳಶಾಹಿ ಮಾತ್ರವಲ್ಲದೆ ಸಾಮ್ರಾಜ್ಯಶಾಹಿ, ಸರ್ವಾಧಿಕಾರತ್ವ, ಫ್ಯಾಸಿಸಂ, ನಾಜಿಸಂಗಳನ್ನೂ ಕೂಡಾ ತೀವ್ರವಾಗಿ ವಿರೋಧಿಸುವರು ಹಾಗೂ ಎಲ್ಲಾ ಅಂಶಗಳು ಪ್ರಗತಿಶೀಲ ಸಾಹಿತ್ಯ ಹೊಸವಿಚಾರಗಳ ಕ್ರಾಂತಿಗೆ ಆಹ್ವಾನಿಸಿತು. ಮಧ್ಯಮ ವರ್ಗದವರ ಸಾಹಿತ್ಯವಾಗಿ ಹೊರಬರಲು ಪ್ರಯತ್ನಿಸುತ್ತಿತ್ತು.

**ಪಾಶ್ಚಾತ್ಯ ಕವಿಗಳು ಪ್ರೇರಣೆ**

ಆಧುನಿಕ ಸಾಹಿತ್ಯದ ಉಗಮಕ್ಕೆ ಪಾಶ್ಚಾತ್ಯ ಕವಿಗಳು ಪ್ರೇರಣೆಯಾದರು. ಎಮಿಲಿ ಜೋಲ, ನಾರ್ವೆಯ ಹೆನ್ರಿಕ್ ಇಬ್ಸನ್, ರಷ್ಯಾದ ಮ್ಯಾಕ್ಸಿಂಗಾರ್ಕಿ, ಮಯುಕೋವಸ್ಕಿ, ಫ್ರಾನ್ಸಿನ ಮೋಪಾಸಾ ಮುಂತಾದ ಲೇಖಕರು ಕನ್ನಡದ ಪ್ರಗತಿಶೀಲ ಬರಹಗಾರರ ಮೇಲೂ ಗಾಢವಾದ ಪ್ರಭಾವ ಬೀರಿದರು. ಕನ್ನಡ ಸಾಹಿತಿಗಳಾದ ವಿ.ಎಂ.ಇನಾಂದರ, ಕೃಷ್ಣಕುಮಾರ ಕಲ್ಲೂರ, ಅ.ನ.ಕೃ, ನಿರಂಜನ, ಬಸವರಾಜ ಕಟ್ಟೀಮನಿ, ತ.ರಾ.ಸು ಮುಂತಾದ ಸಾಹಿತಿಗಳ ಬರವಣಿಗೆಯಲ್ಲಿ ಹೊಸಆಲೋಚನೆಗಳನ್ನು ಕಾಣುತ್ತೇವೆ. ಸಾಮಾಜಿಕ, ರಾಜಕೀಯ ಕ್ಷೇತ್ರದ ಅನ್ಯಾಯಗಳಿಗೆ ಪ್ರತಿಭಟಿಸುವ ಪ್ರವೃತ್ತಿ, ಶ್ರೀ ಸಾಮಾನ್ಯರ ಉದ್ಧಾರದ ಕಳಕಳಿಯನ್ನು ಹೊಂದಿದವರು. ಕಮ್ಯುನಿಷ್ಟ ಚಳುವಳಿಯ ಸ್ಫೂರ್ತಿಯೂ ದೊರೆಯಿತು. ಸಂಪ್ರದಾಯ ನಿಷ್ಠತೆ, ಬದುಕಿನ ಜಡಸಮಸ್ಯೆಗಳಿಗೆ ಸ್ಪಂಧಿಸುವ ಮನೋಧೋರಣೆಯು ವ್ಯಕ್ತವಾಗಿದೆ. ಸಮಾಜದ ಸುತ್ತ ಇರುವ ಕೊಳೆಯನ್ನು ತೊಡೆದುಹಾಕುವ ರೋಷ, ದ್ವೇಷ, ಛಲದ ಭಾವದಿಂದ ಗೌರವಸ್ಥರು ಬಚ್ಚಿಟ್ಟ ನಿಗೂಢ ವಿಷಯವನ್ನು ಬಯಲು ಮಾಡಿ ಬರೆದವರು. ಹಳೆಯ ಸಾಹಿತ್ಯವೆಲ್ಲ ಬೂರ್ಜ್ವಾ ಸಾಹಿತ್ಯವೆಂದು ಕರೆಯುತ್ತಿದ್ದರು. ಲೈಂಗಿಕ ದೌರ್ಜನ್ಯ, ಶೋಷಣೆ, ಧಾರ್ಮಿಕ ಕೇಂದ್ರಗಳಲ್ಲಿ ನಡೆಯುವ ಮೋಸ, ಭ್ರಷ್ಟಚಾರ, ಬೂಟಾಟಿಕೆ, ಮಠಗಳಲ್ಲಿನ ಅನೈತಿಕತೆ ಇಂಥದ್ದನೆಲ್ಲಾ ಪ್ರಗತಿಶೀಲರು ಅನಾವರಣ ಮಾಡಿದರು.

ಅನಕೃರವರ ನಗ್ನಸತ್ಯ, ಶನಿಸಂತಾನ, ಸಂಜೆಗತ್ತಲು, ಕಬ್ಬಿಣದ ಕಾಗೆ, ತ.ರಾ.ಸುರವರ ಮುಂಜಾವಿನಿಂದ ಮುಂಜಾವು, ಮಸಣದ ಹೂವು, ರಕ್ತತರ್ಪಣ, ಕಂಬನಿಯ ಕುಯಿಲು, ತಿರುಗುಬಾಣ, ಬಸವರಾಜ ಕಟ್ಟೀಮನಿರವರ ಮೋಹದ ಬಲೆಯಲ್ಲಿ, ಜರತಾರಿ ಜಗದ್ಗುರು, ಜ್ವಾಲಾಮುಖಿಯ ಮೇಲೆ ಇತ್ಯಾದಿ ಕಾದಂಬರಿಗಳಲ್ಲಿ ಜೀವನದ ಅನೇಕ ನಗ್ನಸತ್ಯಗಳು ಬಯಲು ಮಾಡಿದರು. ಕಾದಂಬರಿಗಳಲಷ್ಟೇ ಅಲ್ಲದೆ ಕಥೆ, ನಾಟಕಗಳ ಮೂಲಕವಾಗಿಯೂ ವಾಸ್ತವತೆಯನ್ನು ತಿಳಿಯಪಡಿಸು ಹಂಬಲದಿಂದ ಕಥೆಗಾರರು ಹುಟ್ಟಿಕೊಂಡರು. ತ.ರಾ.ಸುರವರ 0–0=0 ಕಥೆ ಪ್ರಜ್ಞಾಪ್ರವಾಹ ತಂತ್ರದ ದೃಷ್ಟಿಯಿಂದ ಗಮನಾರ್ಹವಾದುದು. ನಿರಂಜನರವರ ಚಿರಸ್ಮರಣೆ, ದೂರದ ನಕ್ಷತ್ರ, ರಂಗಮ್ಮನ ವಠಾರ, ಅಭಯಾಶ್ರಮ ಕಥೆಗಳು ಹುಟ್ಟಿಕೊಂಡಿವೆ.

ಕನ್ನಡ ಪ್ರಗತಿಶೀಲ ಸಾಹಿತ್ಯ ಚಳುವಳಿಯು ಅತ್ಯಂತ ಜನಪ್ರಿಯತೆಯನ್ನು ಗಳಿಸಿದರೂ ಗಟ್ಟಿಯಾದ ಬರಹಗಾರರಿದ್ದೂ ಅಲ್ಪಾಯುಸಿಯಾದ ಚಳುವಳಿಯಾಯಿತು. ಸಾಹಿತಿಗಳ ಬರಹದ ಆವೇಶ ಉದ್ವೇಗಗಳೇ ಸ್ಥಾಯಿಯಾಗಿರುವ ಯಾವ ಚಿಂತನೆಗಳು ಬಹುಕಾಲ ನಿಲ್ಲಲಾರದೆನ್ನುವುದಕ್ಕೆ ಪ್ರಗತಿಶೀಲ ಸಾಹಿತ್ಯ ಚಳುವಳಿ ಒಂದು ಉದಾಹರಣೆಯಾಯಿತು. ಸಾಹಿತಿಗಳು ಬೇರೆಯವರ ಸಾಹಿತ್ಯವನ್ನು ಧಿಕ್ಕರಿಸಿದರೆ ವಿನಾಃ ಒಳ್ಳೆಯ ಅಂಶಗಳನ್ನಿಟ್ಟುಕೊಂಡು ಮುಂದುವರೆಯಲಿಲ್ಲ. ಇವರ ಕ್ರಾಂತಿಯ ಮನೋಭಾವದ ಉದ್ದೇಶ ಒಳ್ಳೆಯದಾಗಿದ್ದರೂ ಅದೂ ಇತರರಿಗೆ ಸರಿಬರಲಿಲ್ಲ. ವಿ.ಕೃ. ಗೋಕಾಕರು 1950ರಲ್ಲಿ ಡಿಸೆಂಬರ್ ತಿಂಗಳಲ್ಲಿ 26ರಂದು ಮುಂಬಯಿಯಲ್ಲಿ ನಡೆದ ಮೂವತ್ತಾನಾಲ್ಕನೇ ಸಾಹಿತ್ಯ ಸಮ್ಮೇಳನದ ಲೇಖಕ ಗೋಷ್ಠಿಯ ಅಧ್ಯಕ್ಷ ಭಾಷಣ ಮಾಡುತ್ತಾ ನವ್ಯಕಾವ್ಯ ವಿಷಯವನ್ನು ದೀರ್ಘವಾಗಿ ವಿವರಿಸಿದರು. ಇವರು 'ನವ್ಯತೆ'[4] ಪದವನ್ನು ಮೊದಲ ಬಾರಿಗೆ ಬಳಸಿದರು. ಈ ಭಾಷಣವೂ ಸಾಹಿತ್ಯ ಹಾಗೂ ನವ್ಯತೆ ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಯಿತು. ತಮ್ಮ ಮೀತಿಯನ್ನು ಮೀರಬಾರದಾಗಿತ್ತು. ಶಾಂತಿಯಿಂದ ಪಡೆದುಕೊಂಡು ಸಮಾಧಾನದಿಂದಿದ್ದರೆ ಮುಂದಿನ ಸಾಹಿತ್ಯ ಹುಟ್ಟುತ್ತಿರಲಿಲ್ಲ. ಇವರ ಉದ್ವೇಗದ ಮನಃಸ್ಥಿತಿಯಲ್ಲಿ ರಚಿತವಾದ ಕೃತಿಗಳು ಸಹ ನವ್ಯ ಸಾಹಿತ್ಯ ಹುಟ್ಟಿಕೊಳ್ಳಲು ಪ್ರೇರಣೆಯಾದವು. ಪ್ರಗತಿಶೀಲರ ಬರವಣಿಗೆ ಸರಳವಾಗಿ ಸಮಾಜದ ಸಮಸ್ಯೆಗಳನ್ನು ನಿರ್ಭಯವಾಗಿ ಬರೆಯುವುದಕ್ಕೆ ಅವಕಾಶವಿರುವ ವಾತಾವರಣವನ್ನು ಸೃಷ್ಟಿಮಾಡಿದರೆಂಬುದೂ ಸಹ ಆಧುನಿಕ ಸಾಹಿತ್ಯ ಚರಿತ್ರೆಯಲ್ಲಿ ಗಮನಾರ್ಹ ಸಂಗತಿ. ಕಾರ್ಖಾನೆಗಳ ಸೈರನ್ ಕೂಗು, ಮಾರ್ಕ್ಸ್‌ವಾದದ ತಿಳುವಳಿಕೆ, ಮಾನವ ವಾಸ್ತವಿಕ ನೆಲೆಯಲ್ಲಿ ಪ್ರಗತಿಪರ ಆಲೋಚನೆಗಳನ್ನು ಸಮುದಾಯಿಕವಾಗಿ ಸಾಹಿತ್ಯದಲ್ಲಿ ಬಿತ್ತುವ ಕೆಲಸವನ್ನು ಮಾಡಿದರು. ಇವರ ಅತಿಯಾದ ವಿಜೃಂಭಣೆಯಿಂದ ಮತ್ತೊಂದು ಕಾಲಘಟ್ಟದ ನಾಂದಿಗೆ ಅವಕಾಶವಾಯಿತು.

**ನವ್ಯ ಸಾಹಿತ್ಯ**

ನವೋದಯ, ಪ್ರಗತಿಶೀಲ ಸಾಹಿತ್ಯಗಳಂತೆಯೇ ನವ್ಯಸಾಹಿತ್ಯವೂ ಪಾಶ್ಚಾತ್ಯ ಸಾಹಿತ್ಯದಿಂದ ಪ್ರೇರಣೆ ಪಡೆಯಿತು. ಇಂಗ್ಲೀಷಿನ ಮಾರ್ಡನ್ ಪದಕ್ಕೆ ಕನ್ನಡ ಸಂವಾದಿ ಪದ ಹೊಸದು, ನವ್ಯ ಎಂದು ಬಳಸಲಾಗುತ್ತದೆ. ನವ್ಯ ಸಾಹಿತ್ಯದ ಉಗಮದ ಸಮಯದಲ್ಲಿ ಹಲವಾರು ಬದಲಾವಣೆಗಳಾದವು. ನವೋದಯ ಸಾಹಿತ್ಯ ಚಲಾವಣೆ ಕಳೆದುಕೊಂಡಿತ್ತು. ನವ್ಯದ ಪಾಶ್ಚಾತ್ಯ ವಿದ್ವಾಂಸರಾದ ಎಜ್ರಾಪೌಂಡ್, ಟಿ.ಇ.ಹ್ಯೂಮ್, ಸಿ.ಡಿ.ಲೂಯಿ, ಟಿ.ಎಸ್.ಎಲಿಯಟ್, ಆಡೆನ್, ಸ್ಟೀಫನ್ ಸ್ಪೆಂಡರ್, ಡಿಲಾನ್ ಥಾಮಸ್ ಮುಂತಾದವರ ಬರವಣಿಗೆ ಸಾಹಿತಿಗಳ ಮೇಲೆ ಅಗಾಧ ಪ್ರಭಾವವಾಯಿತು. ವಿ.ಕೃ.ಗೋಕಾಕ, ಗೋಪಾಲಕೃಷ್ಣ ಅಡಿಗ, ಶಾಂತನಾಥ ದೇಸಾಯಿ, ಗಂಗಾಧರ ಚಿತ್ತಾಲ, ಯಶವಂತ ಚಿತ್ತಾಲ, ಸು.ರಂ.ಎಕ್ಕುಂಡಿ, ಬಿ.ಸಿ.ರಾಮಚಂದ್ರಶರ್ಮ, ಪಿ.ಲಂಕೇಶ್, ಯು.ಆರ.ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ, ಕೆ.ಎಸ್.ನಿಸಾರ ಅಹಮದ್, ರಾಜೇಂದ್ರ ಚೆನ್ನಿ, ಕಿ.ರಂ.ನಾಗರಾಜ, ಡಿ.ಆರ್.ನಾಗರಾಜ, ಜಿ.ಎಚ್.ನಾಯಕ, ಓ.ಎಲ್.ನಾಗಭೂಷಣಸ್ವಾಮಿ, ನರಹಳ್ಳಿಬಾಲಸುಬ್ರಹ್ಮಣ್ಯಂ, ಎಂ.ಜಿ.ಕೃಷ್ಣಮೂರ್ತಿ, ಹೆಚ್.ಎಂ.ಚೆನ್ನಯ್ಯ, ಸುಮತೀಂದ್ರ ನಾಡಿಗ, ಜಿ.ಎಸ್.ಆಮೂರ, ಎನ್.ಎಸ್.ಲಕ್ಷ್ಮೀನಾರಾಯಣಭಟ್ಟ ಮುಂತಾದ ಕವಿಗಳು ಸಾಹಿತ್ಯದ ಎಲ್ಲಾ ಕ್ಷೇತ್ರಗಳಲ್ಲಿ ಹುಲುಸಾಗಿ ಕೃಷಿ ಮಾಡಿದರು.

---

[4] ಕೀರ್ತಿನಾಥ ಕುರ್ತಕೋಟಿ. (2016). *ಯುಗಧರ್ಮ ಹಾಗೂ ಸಾಹಿತ್ಯ ದರ್ಶನ.* ಪು.ಸಂ. 89

ನವ್ಯ ಸಾಹಿತ್ಯದ ಕೃಷಿ ತುಂಬ ಸಂಪತ್ಭರಿತವಾಗಿತ್ತು. ಹೊಸವಿಚಾರಗಳು, ಆಲೋಚನೆಗಳಿಂದಾಗಿ ಸಾಹಿತ್ಯದ ಸೃಷ್ಟಿಯ ದಿಕ್ಕೇ ಬದಲಾಗಿತ್ತು. ಪಾಶ್ಚಾತ್ಯ ವಿದ್ವಾಂಸರ ಸಂಪೂರ್ಣ ಪ್ರಭಾವ ಈ ಕಾಲಘಟ್ಟದ ಲೇಖಕರ ಮೇಲಾಯಿತು. ಎಂ.ಗೋಪಾಲಕೃಷ್ಣ ಅಡಿಗರವರ 1952ರಲ್ಲಿ ಪ್ರಕಟವಾದ 'ನಡೆದು ಬಂದ ದಾರಿ'[5] ಸಂಕಲನದಲ್ಲಿ ನವ್ಯದ ನಿಶ್ಚಳತೆಯನ್ನು ಕಾಣಬಹುದು. ಆಧುನಿಕ ಕನ್ನಡ ಕಾವ್ಯದಲ್ಲಿ ಒಂದು ಘಟ್ಟ ಕಳೆದು ಮತ್ತೊಂದು ಘಟ್ಟ ಹುಟ್ಟುವ ವಾತಾವರಣ ಸೃಷ್ಟಿಯಾಯಿತು. ಅಡಿಗರ ಮಾತುಗಳಲ್ಲಿ ಸಾಹಿತ್ಯದ ದಿಕ್ಕು ಧೋರಣೆಗಳು ಸ್ಪಷ್ಟವಾಗಿ ನಿರೂಪಿತಗೊಂಡಿವೆ ಹಾಗೂ ಈ ಸಮಯದಲ್ಲಿ ಸೃಷ್ಟಿಗೊಂಡ ಹಲವಾರು ಕೃತಿಗಳು ಭಿನ್ನ ಭಿನ್ನ ದೃಷ್ಟಿಕೋನದಲ್ಲಿ ರಚಿತವಾಗಿರುವುದನ್ನು ಗಮನಿಸಬಹುದು.

ಬಿ.ಸಿ.ರಾಮಚಂದ್ರಶರ್ಮರವರ ಏಳುಸುತ್ತಿನ ಕೋಟೆ, ಬುವಿನೀಡಿದ ಸ್ಫೂರ್ತಿ, ಹೇಸರಗತ್ತೆ, ಯಶವಂತ ಚಿತ್ತಾಲರವರ ಕಾಲದಕತೆ, ಸು.ರಂ.ಎಕ್ಕುಂಡಿರವರ ಮತ್ಸ್ಯಗಂಧಿ, ಬಕುಳದ ಹೂವುಗಳು, ಚಂದ್ರಶೇಖರ ಪಾಟೀಲರವರ ಓ ನನ್ನ ದೇಶ ಬಾಂಧವರೇ, ಗಾಂಧೀಸ್ಮರಣೆ, ಪೂರ್ಣಚಂದ್ರ ತೇಜಸ್ವಿಯವರ ಚಿದಂಬರ ರಹಸ್ಯ, ಚಂದ್ರಶೇಖರ ಕಂಬಾರ ಹೇಳತೇನ ಕೇಳು, ತಕರಾರಿನವರು, ಕೆ.ಎಸ್.ನಿಸಾರ ಅಹಮದ್ ಗಾಂಧಿಬಜಾರ್, ನೆನೆದವರ ಮನದಲ್ಲಿ, ಸಂಜೆ ಐದರ ಮಳೆ, ಪಿ. ಲಂಕೇಶರವರ ಅವ್ವ ಇತ್ಯಾದಿ ಕೃತಿಗಳಿವೆ. ಸಾಹಿತಿಗಳು ಕಥೆ, ಕಾದಂಬರಿ, ನಾಟಕ, ವಿಮರ್ಶೆ ಇತ್ಯಾದಿ ಕ್ಷೇತ್ರಗಳಲ್ಲಿ ಕೃಷಿಮಾಡಿದ್ದಾರೆ. ನವ್ಯ ಸಾಹಿತ್ಯ ಮಾರ್ಗದ ಮತ್ತೊಂದು ವಿಶೇಷವೆಂದರೆ ವಿಮರ್ಶೆಯೆನ್ನುವುದು ಇತರ ಸೃಜನಶೀಲ ಪ್ರಕಾರಗಳಷ್ಟೇ ಮುಖ್ಯವಾದ ಒಂದು ಶಿಸ್ತಾಗಿ ಬೆಳೆದದ್ದು ಹಾಗಾಗಿ ಈ ಕ್ಷೇತ್ರದಲ್ಲಿ ಹಲವಾರು ಲೇಖಕರು ವ್ಯವಸಾಯ ಮಾಡಿದ್ದಾರೆ. ತನ್ನ ಹಿಂದೆ ಸೃಷ್ಟಿಗೊಂಡ ಸಾಹಿತ್ಯ ಪಂಥಗಳ ಕೊರತೆಯನ್ನು ತುಂಬಲು ಪ್ರಯತ್ನಿಸಿತು. ನವ್ಯರು ವ್ಯಕ್ತಿಯ ಮನಸ್ಸಿನ ಸೂಕ್ಷ್ಮ ಪದರುಗಳನ್ನು, ಒಳನೋಟಗಳನ್ನು ಅನಾವರಣ ಮಾಡಲು ಪ್ರಯತ್ನಿಸಿದರು. ಸಾಹಿತ್ಯದಲ್ಲಿ ಭಾಷೆಯ ಬಳಕೆಯನ್ನು ಅತ್ಯಂತ ಪ್ರಜ್ಞಾಪೂರ್ವಕವಾಗಿ ಮಾಡಿದ್ದು ನವ್ಯಸಾಹಿತಿಗಳೇ ಎಂದು ಹೇಳಬಹುದು.

**ಸಮಾರೋಪ**

ಒಟ್ಟಾರೆಯಾಗಿ ಸಾಹಿತ್ಯದಲ್ಲಿ ಬರುವ ಕೃತಿಗಳು ಸಾಮಾಜಿಕವಾದ ಏರುಪೇರುಗಳನ್ನು, ಅವು ವ್ಯಕ್ತಿಯ ಸಂವೇದನೆಯ ಮೇಲೆ ಉಂಟು ಮಾಡುವ ಪರಿಣಾಮಗಳ ಮೂಲಕ ಅರ್ಥಮಾಡಿಕೊಳ್ಳುವುದು ಅವರ ಉದ್ದೇಶವಾಯಿತು. ಕೃತಿಯಲ್ಲಿ ವ್ಯಕ್ತಿಕೇಂದ್ರಿತ ದೃಷ್ಟಿಕೋನವೇ ಪ್ರಧಾನವಾಗಿರುವಂಥದ್ದು, ಅಸ್ತಿತ್ವವಾದವೇ ಅದರ ತಾತ್ವಿಕ ಹಿನ್ನಲೆಯಾಗಿದೆ. ಆಧುನಿಕ ಕಾಲಘಟ್ಟದ ಸಾಹಿತಿಗಳು ನೈತಿಕ ಮೌಲ್ಯಗಳು, ಸ್ವತಂತ್ರ, ಮಾನವೀಯತೆ, ಸ್ವಚ್ಛಂದ ಬದುಕು, ಅನಾಥ ಪ್ರಜ್ಞೆಯ ಇತ್ಯಾದಿ ಅಂಶಗಳನ್ನು ಸಾಹಿತ್ಯದ ಮೂಲಕ ಸೃಷ್ಟಿಸಿದ್ದಾರೆ. ಸಾಹಿತ್ಯ ಪ್ರತಿಯೊಂದನ್ನು ಮಾನವ ಸಂಬಂಧಗಳ ಜಟಿಲತೆಯಲ್ಲಿ, ಸಂಕೀರ್ಣತೆಯಲ್ಲಿ ಪರೀಕ್ಷಿಸುವ, ವಿಮರ್ಶಿಸುವ ಪ್ರಖರವಾದ ದೃಷ್ಟಿಕೋನವುಳ್ಳದ್ದು. ಲೇಖಕರಿಗೆ ಕೃತಿ ಬರೆಯುವಾಗ ಸೂಕ್ಷ್ಮತೆಯ ಅರಿವಿತ್ತು. ಕಾವ್ಯದ ವಸ್ತುವನ್ನು ಕವಿಗಳು ನಿಸರ್ಗದಿಂದ ನಗರ ಜೀವನ ಕೇಂದ್ರಕ್ಕೆ ವರ್ಗಾಯಿಸಿ ಮನಸ್ಸನ್ನು ವ್ಯಕ್ತಿಯ ಅಂತರಂಗದ ಪಾತಾಳಕ್ಕೆ ಇಳಿಸಿತು. ಸಾಹಿತ್ಯವು ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಜಾನಪದ ಕ್ಷೇತ್ರಗಳಲ್ಲಿ

[5]ಶೇಷಗಿರಿ ರಾವ್ ಎಲ್.ಎಸ್. (2017). *ಹೊಸಗನ್ನಡ ಸಾಹಿತ್ಯ ಚರಿತ್ರೆ* ಪು.ಸಂ.83

ಕೃಷಿಮಾಡಿದ್ದಾರೆ. ನವೋದಯ ಹಾಗೂ ಪ್ರಗತಿಶೀಲ ಸಾಹಿತ್ಯ ಪಂಥದಲ್ಲಿಯಾದ ಬದಲಾವಣೆಗಳಿಂತಲೂ ಹೆಚ್ಚಿನ ಬದಲಾವಣೆ ಸಾಹಿತ್ಯ ಬೆಳೆವಣಿಗೆ ಆಯಿತು.

**ಆಕರ ಗ್ರಂಥಗಳು**


- ಕೀರ್ತಿನಾಥ ಕುರ್ತಕೋಟಿ. (2016). *ಯುಗಧರ್ಮ ಹಾಗೂ ಸಾಹಿತ್ಯ ದರ್ಶನ.* ಮೆ॥.ಮಯೂರ ಪ್ರಿಂಟ್ ಆಡ್ಸ್.
- ಲಕ್ಷ್ಮೀನಾರಾಯಣ ಭಟ್ಟ ಎನ್.ಎಸ್. (2019). *ಕನ್ನಡ ಸಾಹಿತ್ಯ ಚರಿತ.* ಅಂಕಿತ ಪುಸ್ತಕ.
- ಶೇಷಗಿರಿ ರಾವ್ ಎಲ್.ಎಸ್. (2017). *ಹೊಸಗನ್ನಡ ಸಾಹಿತ್ಯ ಚರಿತ್ರೆ.* ಅಂಕಿತ ಪುಸ್ತಕ.
- ಶಿವಶರಣಪ್ಪ ಮೋತಕಪಳ್ಳಿ. (2013). *ಕನ್ನಡ ಸಾಹಿತ್ಯ ಸಂಜೀವಿನಿ.* ಸ್ವ–ಪ್ರಕಾಶನ.


**ಪರಾಮರ್ಶನ ಗ್ರಂಥಗಳು**


- ಕೀರ್ತಿನಾಥ ಕುರ್ತಕೋಟಿ. (2013). *ಬೇಂದ್ರೆ ಕಾವ್ಯ ವಿಮರ್ಶೆ.* ಸಂಪುಟ.4, ಮೆ॥.ಮಯೂರ ಪ್ರಿಂಟ್ ಆಡ್ಸ್.
- ಗಿರಡ್ಡಿಗೋವಿಂದರಾಜ. (2012). *ಸಮಗ್ರ ವಿಮರ್ಶೆ.* ಸಂಪುಟ.3, ಸಪ್ನಬುಕ್ ಹೌಸ್.
- ಪೂರ್ಣಚಂದ್ರ ತೇಜಸ್ವಿ ಕೆ.ಪಿ. (2017). *ವಿಮರ್ಶೆಯ ವಿಮರ್ಶೆ.* ಪುಸ್ತಕ ಪ್ರಕಾಶನ
- ವಿಜಯ ಶ್ರೀ ಸಬರದ. (2013). *ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ.* ಸಂಪುಟ.2 ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ.